ಊ) ಯೋಜನೆಗಳಡಿ ಬರುವ ಎಲ್ಲಾ ಆಸ್ಪತ್ರೆಗಳಿಗೂ ಅಗತ್ಯಕ್ಕನುಗುಣವಾಗಿ ಉಪಕರಣಗಳನ್ನು ಒದಗಿಸಲಾಗಿದೆ. (ಅನುಬಂಧ 3 ಲಗತ್ತಿಸಿದೆ) ಈ ಎಲ್ಲಾ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವ ಬಗ್ಗೆ ಸರ್ವೋತೋಪರಿ ಪ್ರಯತ್ನ ಮಾಡಲಾಗುತ್ತಿದೆ. ಈ ಉಪಕರಣಗಳ ನಿರ್ವಹಣೆ ಹಾಗೂ ದುರಸ್ತಿಯು ನಿರಂತರವಾದ ಕೆಲಸವಾದ್ದರಿಂದ 20 ಜಿಲ್ಲಾ ಮಟ್ಟದ ಉಪಕರಣ ದುರಸ್ತಿ ಕಾರ್ಯಾಗಾರಗಳನ್ನು ಸಹಾ ಸ್ಥಾಪಿಸಲಾಗಿದೆ.

ಜಯನಗರ ಸಾರ್ವಜನಿಕ ಗ್ರಂಥಾಲಯಕ್ಕೆ ಹೆಚ್ಚಿನ ಸೌಲಭ್ಯ

1022 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸೌತ್ ಎಂಡ್ ಬಳಿ ಇರತಕ್ಕ ಸಾರ್ವಜನಿಕ ಗ್ರಂಥಾಲಯದಲ್ಲಿ ಕಂಪ್ಯೂಟರ್ ಇಂಟರ್‌ನೆಟ್ ಹಾಗೂ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಸ ಹೊಸ ಪುಸ್ತಕಗಳನ್ನು ಒದಗಿಸಲಾಗಿದೆಯೇ?

ಆ) 1999-2000ನೇ ಸಾಲಿನಲ್ಲಿ ಈ ಗ್ರಂಥಾಲಯಕ್ಕೆ ಹೊಸ ಪುಸ್ತಕಗಳನ್ನು ಖರೀದಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು?

ಇ) ಈ ಗ್ರಂಥಾಲಯವನ್ನು ಅಭಿವೃದ್ಧಿಗೊಳಿಸಲು ಖಾಸಗಿ ಸಂಸ್ಥೆಗಳಿಂದ ದೇಣಿ ವಸೂಲಿ ಮಾಡಲು ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಂಟರ್‌ನೆಟನ್ನು ಹೊರತುಪಡಿಸಿ, ಕಂಪ್ಯೂಟರನ್ನು ಅಳವಡಿಸಿದೆ. ಹಾಗೂ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಆಯ್ಕೆ ಪಟ್ಟಿಯನುಸಾರ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಹೊಸ ಪುಸ್ತಕಗಳನ್ನು ಒದಗಿಸಿದೆ.

ಆ) ದಕ್ಷಿಣವಲಯ ನಗರ ಕೇಂದ್ರ ಗ್ರಂಥಾಲಯಕ್ಕೆ ಹಂಚಿಕೆಯಾದ 35.00 ಲಕ್ಷ ರೂ. ಹಣದಲ್ಲಿ 4.00 ಲಕ್ಷವನ್ನು (ಹೊಸ ಪುಸ್ತಕ ಖರೀದಿಗೆ) ಜಯನಗರ ಗ್ರಂಥಾಲಯಕ್ಕೆ ಬಿಡುಗಡೆ ಮಾಡಲಾಗಿದೆ.

ಇ) ಹೌದು.

ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸುವುದು

1024 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತದೆಯೇ?